# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ, ಬೆಂಗಳೂರು

---

ಸಂ: ಸ.ಅ/ವಾ-183/ಪಿ.ಆರ್/01/2022-23 ದಿನಾಂಕ : 21-05-2022

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ ಪಿಆರ್2(58)ಪಿಆರ್/35/2020-21 ದಿನಾಂಕ 21-09-2020 ರವರ ಆದೇಶದಂತೆ ದಿನಾಂಕ 21-05-2022 ರಂದು ವಾರ್ಡ್ ಸಂಖ್ಯೆ-183 ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ 30-04-2022 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 10.30 ಗಂಟೆಗೆ ನೋಡಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ಸಚಿನ್ (ಕಿಯೋನಿಕ್ಸ್) ಸದಸ್ಯ ಕಾರ್ಯದರ್ಶಿ ರವರ ಕಾರ್ಯಾಧ್ಯಕ್ಷತೆಯಲ್ಲಿ ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಇಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು :-

1. ವಾರ್ಡ್‌ನಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ನೋಡಲ್ ಅಧಿಕಾರಿಯವರು ತಿಳಿಸಿದಾಗ ವಾರ್ಡ್ ಅಭಿಯಂತರರು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.
2) ಮ್ಯಾನ್‌ಹೋಲ್‌ನಲ್ಲಿ ತೆಗೆದಂತೆ ಮಣ್ಣನ್ನು ಸಾಗಿಸುವಂತೆ ಜಲಮಂಡಳಿ ಅಧಿಕಾರಿಯವರಿಗೆ ಸಾರ್ವಜನಿಕರಿಗೆ ಕೋರಿದಾಗ ವಾರದಲ್ಲಿ 1 ದಿನ ಮ್ಯಾನ್‌ಹೋಲ್‌ನಿಂದ ತೆಗೆದಿರುವ ಮಣ್ಣನ್ನು ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.
3) ಬೆಸ್ಕಾಂ ಇಲಾಖೆಯಿಂದ ಕಟ್ಟಾವು ಮಾಡಿರುವ ಮರಗಳನ್ನು ತೆರವುಗೊಳಿಸುವಂತೆ ನೋಡಲ್ ಅಧಿಕಾರಿಯವರು ಸೂಚಿಸಿದಾಗ ಬೆಸ್ಕಾಂನ ಅಧಿಕಾರಿಗಳು ಕೂಡಲೇ ಅವುಗಳನ್ನು ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು.
4) ಮಳೆಗಾಲ ಪ್ರಾರಂಭವಾಗಿರುವ ಹಿನ್ನಲೆಯಲ್ಲಿ ಅಗತ್ಯ ಮುನ್ನಚ್ಚರಿಕೆ ಕ್ರಮ ಕೈಗೊಳ್ಳುವಂತೆ ನೋಡಲ್ ಅಧಿಕಾರಿಯವರು ಸಭೆಗೆ ತಿಳಿಸಿರುತ್ತಾರೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sachin

ವಾರ್ಡ್ ಸಮಿತಿ ಸಂಚಾಲಕರು

21/05/22

ವಾರ್ಡ್ 183 ರ ನೋಡಲ್ ಅಧಿಕಾರಿ.

Scanned with OKEN Scanner